ಬೋಧಕ ಸಿಬ್ಬಂದಿ ಕಡಿಮೆ ಇದ್ದು ಅವುಗಳನ್ನು ಭರ್ತಿಮಾಡಲು ಸರ್ಕಾರದವರು ತ್ವರಿತ ಕ್ರಮ ಕೈಗೊಳ್ಳುವರೇ :—

ಶ್ರೀ ಬಿ. ರಾಚಯ್ಯ ಮಾನ್ಯ (ವಿದ್ಯಾ ಸಚಿವರು).—

ಅ) ಖಾಲಿ ಇರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಸೂಕ್ತ ಕ್ರಮ ಕೈಕೊಳ್ಳಲಾಗಿದೆ.

Srinivasa Education Society Hindloor

266 (730) **Sri B. Ganganna (Kallambella)** --Will the Minister for Education be pleased to state:--

a) whether it is not a fact that the students, parents, staff and the local member of the Legislative Assembly are requesting for the transfer of the High School run by Mahatma Education Society, Chelur, at Hinldoor, Bukkapatna Hubli, Sira Taluk to the management of Srinivasa Education Society, Hin-door ;

b) if so, the action taken by the Government in this regard ?

a) Yes Sri B. Rachaiah (Ministr for Education)

b) The matter is under examination by the Department.

ANNOUNCEMENT

Mr. Speaker.--I have received the following 'message from the Chairman, Legisltive Council.

"As required by rule 114 of the Rules of procedure and Conduct of Business in the Karnataka Legiseative Council' I send herewith the following Bills which have been agreed to by the Legislative Council on 21st February, 1984 with-out amendments.

1) The Karnataka Agricultural Credit Pass Book Bill, 1984.
2) The Karnataka Land Reforms (Amendment) Bill, 1984.
3) The Karnataka State Universities (Amendment) Bill, 1984.
4) The Karnataka Legislature Salaries, Pensions and Allowances (Amendment) Bill, 1984.

ನಿಯಮ 334ರ ಮೇರೆಗೆ 34

1 ವಿಷಯ :--ಬೀದರ್‌ನಲ್ಲಿ ಉಪಾಧ್ಯಾಯರ ನೇಮಕಾತಿಯ ಬಗ್ಗೆ.

ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ).—ಮಾನ್ಯ ಅಧ್ಯಕ್ಷರೇ, ನಾನು ನಿಯಮ 334ರ ಕೆಳಗೆ ತಮಗೆ ಒಂದು ನೋಟೀಸನ್ನು ಕಳುಹಿಸಿಕೊಟ್ಟಿದ್ದೆ. ಅದು ಏನೆಂದರೆ ನಮ್ಮ ಬೀದರ್‌ನಲ್ಲಿ 86 ಜನ ವಿದ್ಯಾರ್ಥಿಗಳು ಉಪವಾಸ ಮುಷ್ಕರ.....

ಅಧ್ಯಕ್ಷರು —ನನ್ನ ಹತ್ತಿರ ಪಟ್ಟಿ ಇದೆ. ಅದನ್ನು ನಾನು ನೋಡಬೇಡವೆ ? ಇಷ್ಟೊಂದು ಆತುರವಾಗಿ ನಿಂತುಕೊಂಡು ಮಾತನಾಡಿದರೆ ಹೇಗೆ ಸಾಧ್ಯವಾಗುತ್ತದೆ ? ಇಲ್ಲಿ ನೋಡಿ ನಿಮ್ಮ ಹೆಸರೇ ಮೊದಲವೆಯದಾಗಿದೆ ನಾನು ತಮ್ಮ ಹೆಸರನ್ನು ಕರೆಯುವುದರೊಳಗಾಗಿ ತಮಗೆ ಇಷ್ಟೊಂದು ಆತುರ. ಅದು ಏನು ಹೇಳಿ.

ಶ್ರೀ ಭೀಮಣ್ಣ ಖಂಡ್ರೆ —ಈಗ ರಿಕ್ರೂಟ್‌ಮೆಂಟ್ ಕಮಿಟಿಗಳನ್ನು ರದ್ದು ಮಾಡಿದ್ದೀರಿ. ಇದರಲ್ಲಿ ಒಂದು ದುಃಖದ ಸಂಗತಿಯಾಗಿದೆ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಮಂತ್ರಿಗಳು ನಾನು ಹೇಳುವುದಕ್ಕೆ ಮೊದಲೆ ಡಿಸಿಷನ್ ತೆಗೆದುಕೊಂಡಿರುವುದರಿಂದ ಅವರಿಗೆ ನಾನು ಆಬ್ಲಿಗೇಶನ್ ಯಾಗಿದ್ದೇನೆ. ನಾನಾದರೂ ಹೇಳುವುದಿಷ್ಟೇ. ಯಾವ ಜನರು ನಮ್ಮ ಜಿಲ್ಲೆಯಲ್ಲಿ ಉಪವಾಸ ಮುಷ್ಕರ ಕೂತಿದ್ದಾರೆ ಅವರು ಬಹಳ ಹಿಂದುಳಿದವರ್ಗದವರು, ಟ್ರೈಬಿಂಗ್ ಆಗಿರುವವರು, ನಯೋಮಿತ ಮೀನರು

ವವರು ಇದ್ದಾರೆ. ಇವರಿಗೆ ಇದುವರೆಗೂ ಇಂಟರ್‌ವ್ಯೂಗೆ ಕರೆ ಬಂದಿಲ್ಲ. ಅಲ್ಲಿ ಏನಾಗಿದೆ ಎಂದರೆ ಟ್ರೈನಿಂಗ್ ಆಗಿರುವವರನ್ನು ಬಿಟ್ಟು ಟ್ರೈನಿಂಗ್ ಆಗದೇ ಇರುವವರಿಗೆ ಇಂಟರ್‌ವ್ಯೂಗೆ ಕಳುಹಿಸಿಕೊಡುತ್ತಿದ್ದಾರೆ. ಅಲ್ಲಿ ಒಂದೊಂದು ಪೋಸ್ಟ್‌ಗೆ 10–15 ಸಾವಿರ ರೂಪಾಯಿವರೆಗೂ ತೆಗೆದುಕೊಂಡು ಇದನ್ನು ಒಂದು ವ್ಯಾಪಾರವಾಗಿ ಮಾಡುತ್ತಿದ್ದಾರೆ. ಟ್ರೈನಿಂಗ್ ಆಗಿರುವವರಿಗೆ ಆದ್ಯತೆ ಕೊಡುತ್ತೇವೆಂದು ಹಿಂದಿನ ಸರ್ಕಾರದವರೂ ಆಶ್ವಾಸನೆ ಕೊಟ್ಟಿದ್ದರು. ಈಗಿನ ಸರ್ಕಾರದವರೂ ಆಶ್ವಾಸನೆ ಕೊಟ್ಟಿದ್ದರು. ಆದರೆ ಇದುವರೆಗೂ ಇದು ಕಾರ್ಯಗತವಾಗಿಲ್ಲ. ಆದ್ದರಿಂದ ಈ ಒಂದು ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ: ಯಾರು ಟ್ರೈನಿಂಗ್ ಮಾಡಿಕೊಂಡಿದ್ದು ಹಿಂದುಳಿದವರ್ಗದವರಿದ್ದಾರೆ ಅವರಿಗೆ ಆದ್ಯತೆಯನ್ನು ಕೊಟ್ಟು ವಯೋಮಿತಿ ಮೀರಿದವರಿಗೆ ರಿಯಾಯಿತಿ ಕೊಟ್ಟು ಅವರು ಸೇವೆ ಸಲ್ಲಿಸಲು ಅವಕಾಶ ಮಾಡಿಕೊಡುತ್ತೀರಾ? ಮತ್ತು ಕಳೆದ 7 ದಿನಸಗಳಿಂದ ಇವರು ಊಟ ತಿಂಡಿ ಇಲ್ಲದೆ ಇನ್ನು ಸಾಯುವ ಸ್ಥಿತಿಯಲ್ಲಿದ್ದಾರೆ, ಅವರ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟು ಅವರಿಗೆ ರಕ್ಷಣೆ ಕೊಡುತ್ತೀರಾ?

ಶ್ರೀ ಬಿ. ರಾಚಯ್ಯ.—ನಿಯಮಾವಳಿಯ ಪ್ರಕಾರವೇ ನೇಮಕಾತಿಗಳನ್ನು ಮಾಡಬೇಕೆಂದು ನಾವು ಕೇಳಿದ್ದೆವು. ಆದರೆ ನ್ಯಾಯಾಲಯದವರು 29 ವರ್ಷಕಿಂತ ಹೆಚ್ಚಿಗೆ ವಯಸ್ಸಾದವರಿಗೆ ಆದ್ಯತೆ ಕೊಡಬೇಕೆಂದು ಹೇಳಿದ್ದುದನ್ನು ಹೊಡೆದುಹಾಕಿ 18ರಿಂದ 45 ವರ್ಷದವರಿಗೆ ಅರ್ಜಿಹಾಕಿಕೊಳ್ಳಲು ಅವಕಾಶ ಕೊಡಬೇಕೆಂದು ಆದೇಶ ಕೂಟ್ಟಿದ್ದಾರೆ. ಈಗ ನಾವು ಅಭ್ಯರ್ಥಿಗಳನ್ನು ಇಂಟರ್‌ವ್ಯೂಗೆ ಕರೆಯಬೇಕಾದರೆ ಆ ಹುದ್ದೆಗೆ 10 ಜನರ ಪ್ರಕಾರ ಕರೆಯಬೇಕಾಗುತ್ತದೆ.

ಶ್ರೀ ಬಿ. ರಾಚಯ್ಯ.—ಇನ್ನು ಕೆಲವರಿಗೆ ಅರ್ಹತೆ ಬಂದಿರುವುದಿಲ್ಲ. ಅವರು ಯಾವ ಗುಂಪಿಗೆ ಸೇರುತ್ತಾರೆ, ಎಂಬುದನ್ನು ನೋಡಿ ನಿಯಮಾವಳಿ ಕೆಳಗಡೆ ತೆಗೆದುಕೊಳ್ಳಿ ಅಂದರೆ ಏನಾದರೂ ಮಾಡಲಿಕ್ಕೆ ಸಾಧ್ಯ. ವಿದ್ಯಾಭ್ಯಾಸ ಇಲಾಖೆಯಲ್ಲಿ ಸ್ವಲ್ಪಮಟ್ಟಿಗಾದರೂ ಮೆರಿಟ್ ಇಲ್ಲದಿದ್ದರೆ ಪಾಠ ಪ್ರವಚನಗಳನ್ನು ಹೇಗೆ ಮಾಡುತ್ತಾರೆ. ಅವರಿಗೆ ಒಂದು ನಿಯಮಾವಳಿಯನ್ನು ಮಾಡಲಿಕ್ಕೆ ಪರಿಶೀಲಿಸೋಣ.

ಶ್ರೀ ಭೀಮಣ್ಣ ಖಂಡ್ರೆ.—ಟ್ರೈನ್ಡ್ ಟೀಚರ್ಸ್ ಇದ್ದಾರೆ. ಅವರನ್ನು ತೆಗೆದುಕೊಳ್ಳಿ ಹಾಗೂ ಏಜ್ ಬಾರ್ ಆಗುವವರು ಇರುತ್ತಾರೆ, ನೀವು ಇವರ ಬಗ್ಗೆ ಸ್ವಲ್ಪ ಕನ್ಸೆಷನ್ ಕೊಡಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರೇ ನಿಯಮಾವಳಿಯನ್ನು ಕಳುಹಿಸಿಕೊಟ್ಟಲ್ಲಿ ಅದನ್ನು ಪರಿಶೀಲನೆ ಮಾಡುತ್ತೇನೆ. ಅವರು ಯಾರೇ ಆಗಲಿ, ಪದವೀಧರರೇ ಆಗಿರಲಿ ಟ್ರೈನೀಸ್‌ಗಳೇ ಆಗಿರಲಿ ಅವರ ಬಗ್ಗೆ ಕೂಡಾ ಪರಿಶೀಲನೆ ಮಾಡುತ್ತೇನೆ.

(11) ಉತ್ತರ ಕನ್ನಡ ಜಿಲ್ಲೆಯಲ್ಲಿ ರೈತರಿಗೆ ಅಧಿಕಾರಿಗಳಿಂದ ಕಿರುಕುಳ :

ಶ್ರೀ ರಾಮಕೃಷ್ಣ ಹೆಗ್ಗಡೆ.— ಮಾನ್ಯ ಅಧ್ಯಕ್ಷರೇ, ರೈತರು ಭತ್ತ ಸಾಗಣೆಕೆ ಮಾಡುವಾಗ, ಮಾರ್ಕೆಟಿಂಗ್ ಸೊಸೈಟಿಯಿಂದ, ಪ್ರೈಮರಿ ಸೊಸೈಟಿಗಳಿಗೆ ತೆಗೆದುಕೊಂಡು ಹೋಗಬೇಕಾದರೆ ಮಧ್ಯದಲ್ಲಿ ಅಧಿಕಾರಿಗಳು ಹಿಡಿದು ಬಹಳ ತೊಂದರೆ ಕೊಡುತ್ತಿರುವುದರಿಂದ ಬಹಳ ರೈತರಿಗೆ ತೊಂದರೆಯಾಗುತ್ತಿದೆ. ಈ ರೀತಿ ಮಾಡಿದರೆ ರೈತರಿಂದ ಸಾಲ ವಸೂಲಾಗುವುದಿಲ್ಲ. ಅರ್ಧ ಲೆವಿಕೊಟ್ಟರೆ ಬಿಡುತ್ತೇವೆಂದು ಹೇಳುತ್ತಾರೆ ಗಾಡಿಗಳಲ್ಲಿ ಭತ್ತವನ್ನು ತೆಗೆದುಕೊಂಡು ಹೋಗುವಾಗ ಸೀಸ್ ಮಾಡಿ ಅರ್ಧಭಾಗ ಭತ್ತವನ್ನು ಲೆವಿಯಾಗಿ ಕೊಡಬೇಕೆಂದು ಹೇಳುತ್ತಾರೆ. ನಮ್ಮ ಜಿಲ್ಲೆಯಿಂದ ಒಂದು ಚೀಲ ಅಕ್ಕಿ ತೆಗೆದುಕೊಂಡು ಹೋಗಬೇಕಾದರೆ ಹಿಡಿಯುತ್ತಾರೆ ಈ ವ್ಯಾಪಾರದಲ್ಲಿ ಜನರಿಗೆ ಬಹಳ ಲುಕ್ಸಾನಾಗಿದೆ. ಆದ್ದರಿಂದ ಆಹಾರ ಮಂತ್ರಿಗಳ ಮತ್ತು ಸಹಕಾರ ಮಂತ್ರಿಗಳ ಗಮನಕ್ಕೆ ಇದನ್ನು ತರುತ್ತಿದ್ದೇನೆ ಏಕೆಂದರೆ ಸಹಕಾರ ಸಂಘಗಳಿಂದ ಸಾಲ ವಸೂಲು ಆಗದಿದ್ದರೆ ಮುಂದೆ ಅವರಿಗೆ ಸಾಲ ಸಿಗುವುದಿಲ್ಲ. ಈಗ ಅವರಿಗೆ ಕನ್ಸೆಷನ್ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಎರಡನೆಯದಾಗಿ ರೆವಿನ್ಯೂ ಡಿಪಾರ್ಟಮೆಂಟಿನವರು ತೊಂದರೆ ಕೊಡುತ್ತಿರುವುದರಿಂದ ಯಾರೂ ಅವರ ಸಹಾಯಕ್ಕೆ ಬರುತ್ತಿಲ್ಲ ಅಲ್ಲಿ ವಿಟಮಿನ್ ಎ. ಆಧಾರದ ಮೇಲೆ ಎಲ್ಲಾ ಕೆಲಸ ನಡೆಯುತ್ತಿದೆಯೆಂದು ನಾನು ಈ ಸಂದರ್ಭದಲ್ಲಿ ಬಹಳ ವಿಷಾದದಿಂದ ಹೇಳುತ್ತಿದ್ದೇನೆ.

ಶ್ರೀ ಬಿ. ಶಿವಪ್ಪ.—ಈ ಲೆವಿ ವಸೂಲಾತಿಯಲ್ಲಿ ಸ್ವಲ್ಪ ಕೆಳಮಟ್ಟದಲ್ಲಿ ಸ್ವಲ್ಪ ರೈತರಿಗೆ ತೊಂದರೆಯಾಗಿದೆ. ರೈತರಿಗೆ ಆಗಿರತಕ್ಕಂಥ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆ. ರೈತರಿಗೆ ಯಾವ ರೀತಿಯಲ್ಲೂ ತೊಂದರೆಯಾಗದಂತೆ ಹಾಗೂ ಕಿರುಕುಳು ಕೊಡದಂತೆ ನಾವು ಈಗಾಗಲೇ ಅಧಿಕಾರಿಗಳಿಗೆ ನಿರ್ದೇಶನ ಕೊಟ್ಟಿದ್ದೇವೆ ಎಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.